**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.72/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಪುಷ್ಪ | ಪ್ರಾಸಾ-1 |
| ಗಂಡನ ಹೆಸರು | : ಪ್ರವೀಣ್ | ಚಾಸಾ-1 |
| ವಯಸ್ಸು | : 27 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಅಂಗನವಾಡಿ ಸಹಾಯಕಿ | ದಿನಾಂಕಃ 29.04.2025. |
| ವಾಸಸ್ಥಳ | : ಬಣಕಲ್. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನನಗೆ ಆರೋಪಿಯ ಪರಿಚಯವಿರುತ್ತದೆ. ಆರೋಪಿಯು ಈ ದಿನ ಗೈರು ಹಾಜರಿದ್ದು ಅವರ ಗುರುತುವಿಕೆಯ ಬಗ್ಗೆ ತಕರಾರು ಇರುವುದಿಲ್ಲ. ಚಾಸಾ-2 ನನ್ನ ಅಕ್ಕನ ಮಗಳು. ಚಾಸಾ-3 ನನ್ನ ಗಂಡ. ಚಾಸಾ-4 ರವರ ಪರಿಚಯ ನನಗಿದೆ.

ದಿ.26.06.2023 ರಂದು ನಮ್ಮ ಪಕ್ಕದ ಮನೆಯ ಆರೋಪಿಯಾದ ವಿಜಯ್ ಎಂಬಾತ ದೈಹಿಕವಾಗಿ ಸಹಕರಿಸಲು ನನಗೆ ಒತ್ತಾಯ ಮಾಡಿರುತ್ತಾರೆ, ನಾನು ಅದಕ್ಕೆ ಒಪ್ಪಿಗೆ ಸೂಚಿಸಿರುವುದಿಲ್ಲ. ಆದ ಕಾರಣ ಅದೇ ದಿನ ಸಂಜೆ 6.00 ರ ಸಮಯದಲ್ಲಿ ತಮ್ಮ ವಾಟ್ ಸಾಪ್ ಸ್ಟೇಟಸ್ ನಲ್ಲಿ ನನ್ನ ಬಗ್ಗೆ ಅಪಪ್ರಚಾರ ಮಾಡಿರುತ್ತಾರೆ. ಅದೇನೆಂದರೆ ನಾನು ಅವರಿಂದ 8 ತಿಂಗಳ ಗರ್ಭಿಣಿಯಾಗಿರುತ್ತೇನೆ ಮತ್ತು ನನ್ನ ಎರಡನೇ ಹೆಂಡತಿಯ ಸೀಮಂತವನ್ನು ಹಮ್ಮಿಕೊಂಡಿರುತ್ತೇವೆ ಎಂದು ಆರೋಪಿಯು ತಮ್ಮ ವಾಟ್ ಸಾಪ್ ಸ್ಟೇಟಸ್ ನಲ್ಲಿ ಹಾಕಿಕೊಂಡಿರುತ್ತಾರೆ. ನಂತರ ಅದೇ ದಿನ ನಾನು ಬಣಕಲ್ ಪೋಲಿಸ್ ಠಾಣೆಯಲ್ಲಿ ಆರೋಪಿಯ ವಿರುದ್ಧ ದೂರನ್ನು ದಾಖಲಿಸಿರುತ್ತೇನೆ. ನಂತರ ಪೋಲಿಸರು ಆರೋಪಿಗೆ ಕರೆ ಮಾಡಿ ಠಾಣೆಗೆ ಬರ ಹೇಳುತ್ತಾರೆ ಆದರೂ ಆರೋಪಿಯು ಬರುತ್ತಿಲ್ಲ. ನಾನು 9 ಗಂಟೆ ಸಮಯದ ವರೆಗೂ ಠಾಣೆಯಲ್ಲಿ ಇರುತ್ತೇನೆ ನಂತರ ಪೋಲಿಸರು ಈ ವಿಷಯದ ಕುರಿತು ಆರೋಪಿಯು ಪುನಃ ನಿಮಗೆ ಯಾವುದೇ ರೀತಿ ತೊಂದರೆ ನೀಡಿದ್ದಲ್ಲಿ 112 ಸಂಖ್ಯೆಗೆ ಕರೆ ಮಾಡಿ ಎಂದು ತಿಳಿಸಿರುತ್ತಾರೆ. ದಿ.26.06.2023 ರಂದು ರಾತ್ರಿ 10.15 ರ ಸಮಯ ದಲ್ಲಿ ಆರೋಪಿಯು ಬಂದು ಪುನಃ ನಮ್ಮ ಮನೆಯ ಬಾಗಿಲನ್ನು ಬಡಿದಿರುತ್ತಾರೆ. ಆ ಸಮಯದಲ್ಲಿ ಚಾಸಾ-2 ಮತ್ತು ನಾನು ಮಾತ್ರ ಮನೆಯಲ್ಲಿ ಇದ್ದೆವು. ನನ್ನ ಗಂಡನಾದ ಚಾಸಾ-3 ರವರು ಮಗುವನ್ನು ಕರೆದುಕೊಂಡು ಬರಲು ನಮ್ಮ ಅತ್ತೆಯ ಮನೆಗೆ ಹೋಗಿದ್ದರು. ನಾನು ಬಾಗಿಲು ತೆಗೆಯಲಾಗಿ ಆರೋಪಿಯು ಒಳಗೆ ಬಂದು ನನ್ನ ಬಟ್ಟೆಯನ್ನು ಇಳಿದು ಎಳೆದಾಡಿ ನನ್ನ ಎದೆಯನ್ನು ಮುಟ್ಟಿ ಡಿ.ಎನ್.ಎ ಟೆಸ್ಟ್ ಮಾಡಿಸು ಎಂದು ಹೇಳುತ್ತಾರೆ.

ನಂತರ ಆರೋಪಿಯು ನನಗೆ ಅವಾಚ್ಯ ಶಬ್ದಗಳಿಂದ ಬೈದು, ಚಾಸಾ-2 ರವರಿಗೆ ಕೊಲೆ ಬೆದರಿಕೆಯನ್ನು ಹಾಕಿರುತ್ತಾರೆ. ಚಾಸಾ-2 ರವರು ಚಾಸಾ-3 ರವರಿಗೆ ಕರೆ ಮಾಡಲು ಹೋದಾಗ ಆರೋಪಿಯು ಅವರಿಗೂ ಬೆದರಿಕೆಯನ್ನು ಹಾಕಿರುತ್ತಾರೆ. ಆ ಸಮಯದಲ್ಲಿ ನಾನು 112 ಮತ್ತು ಚಾಸಾ-3 ರವರಿಗೆ ಕರೆ ಮಾಡಿದ ತಕ್ಷಣ ಆರೋಪಿಯು ಸ್ಥಳದಿಂದ ಪರಾರಿಯಾಗುತ್ತಾರೆ. ಸದರಿ ಘಟನೆ ನಡೆದ 5 ನಿಮಿಷದ ನಂತರ ಪೋಲಿಸರು ಮತ್ತು ಚಾಸಾ-3 ರವರು ಸ್ಥಳಕ್ಕೆ ಆಗಮಿಸುತ್ತಾರೆ ನಂತರ ಪೋಲಿಸರು ಆರೋಪಿಯ ಮೊಬೈಲ್ ಸ್ಟೇಟಸ್ ನ ಸ್ಕ್ರೀನ್ ಶಾಟ್ ತೆಗೆದುಕೊಂಡು

ಹೋಗಿರುತ್ತಾರೆ. ನಂತರ ದಿ.27.06.2023 ರಂದು ನಾವು ಠಾಣೆಗೆ ಹೋಗಿ ದೂರನ್ನು ದಾಖಲಿಸಿರುತ್ತೇನೆ. ಸದರಿ ದೂರನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು ಗುರುತಿಸಿದ್ದು ಅದನ್ನು ನಿಪಿ-1, ಅದರಲ್ಲಿರುವ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ದಿ.27.06.2023 ರಂದು ಪೋಲಿಸರು ಪ್ರ.ವ.ವ ಯನ್ನು ದಾಖಲಿಸಿರುತ್ತಾರೆ, ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-2, ಅದರಲ್ಲಿರು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ದಿ.06.07.2023 ರಂದು ನಾನು ನ್ಯಾಯಾಲಯದ ಮುಂದೆ ಹಾಜರಾಗಿ ಕಲಂ 164 ರಡಿಯಲ್ಲಿ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ನಂತರ ದಿ.08.07.2023 ರಂದು ಪೋಲಿಸರು ನನ್ನ ಸಮಕ್ಷಮ ಸ್ಥಳ ಮಹಜರ್ ನ್ನು ಜರುಗಿಸಿರುತ್ತಾರೆ. ಅದನ್ನು ಸಾಕ್ಷಿಯು ನೋಡಿ ಗುರುತಿಸಲಾಗಿ ಅದನ್ನು ನಿಪಿ-3, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು ಮತ್ತು ಅದೇ ಸಂದರ್ಭದಲ್ಲಿ ಚಾಸಾ-5 ಮತ್ತು 6 ರವರ ಸಮಕ್ಷಮ ಫೋಟೋಗಳನ್ನು ತೆಗೆದರುತ್ತಾರೆ. ಅದನ್ನು ಸಿಡಿ ಮತ್ತು 65(ಬಿ) ಪ್ರಮಾಣ ಪತ್ರದ ಧೃಢೀಕೃತ ಪ್ರತಿಯೊಂದಿಗೆ ನಿಪಿ-4 ರಿಂದ 6 ಎಂದು ಗುರುತಿಸಲಾಯಿತು. ಆಗ ಸಮಯ ಬೆ.11.00 ಗಂಟೆಯಾಗಿರುತ್ತದೆ.

**ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.72/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಪಾವನಿ | ಪ್ರಾಸಾ-1 |
| ತಂದೆಯ ಹೆಸರು | : ಗೋಪಿ | ಚಾಸಾ-2 |
| ವಯಸ್ಸು | : 12 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ವ್ಯಾಸಂಗ | : 7 ನೇ ತರಗತಿ | ದಿನಾಂಕಃ 29.04.2025. |
| ವಾಸಸ್ಥಳ | : ಬಣಕಲ್. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ಸಾಕ್ಷಿಯು ಅಪ್ರಾಪ್ತ ವಯಸ್ಸಿನ ಬಾಲಕಿಯಾಗಿದ್ದು, ಸಾಕ್ಷಿ ವಿಚಾರಣೆ ಮಾಡುವ ಮೊದಲು ಅವರಿಗೆ ಸಾಮಾನ್ಯ ಪ್ರಶ್ನೆಯನ್ನು ಕೇಳಲಾಯಿತು.

ಚಾಸಾ-1 ರವರು ನನ್ನ ಚಿಕ್ಕಮ್ಮ, ಚಾಸಾ-3 ನನ್ನ ಚಿಕ್ಕಪ್ಪ. ನಾನು 7 ನೇ ತರಗತಿಯನ್ನು ಮೈಸೂರಿನ ಬೆಳ್ಳಾಲೆ ಶಾಲೆಯಲ್ಲಿ ಓದುತಿರುತ್ತೇನೆ. ನಾನು ಮೈಸೂರಿನಲ್ಲಿ ನನ್ನ ತಂದೆ-ತಾಯಿಯರ ಒಟ್ಟಿಗೆ ವಾಸಿಸಿರುತ್ತೇನೆ.

ನಾನಾ ಸ್ವಲ್ಪದಿನಗಳ ಕಾಲ ನನ್ನ ತಂದೆ-ತಾಯಿಯ ಜೊತೆ ವಾಸಿಸುತ್ತಿರಲಿಲ್ಲ, ನಾನು ನನ್ನ ಚಿಕ್ಕಮ್ಮನ ಜೊತೆ ಅವರ ಮನೆಯಲ್ಲಿ ವಾಸಿಸುತ್ತಿರುತ್ತೇನೆ. ದಿ.26.06.2023 ರಂದು ಸುಮಾರು 10.00 ಗಂಟೆ ಸಮಯದಲ್ಲಿ ನಾನು ಮಲಗಿದ್ದೆ, ನನ್ನ ಚಿಕ್ಕಮ್ಮ ಹಾಲ್ ನಲ್ಲಿ ಇದ್ದರು ಆ ಸಮಯದಲ್ಲಿ ಯಾರೋ ನಮ್ಮ ಮನೆಯ ಬಾಗಿಲನ್ನು ತಟ್ಟಿದ ಶಬ್ಬ ಕೇಳಿತು. ಆ ಸಂದರ್ಭದಲ್ಲಿ ಬಾಗಿಲನ್ನು ತೆರೆದಿರುತ್ತಾರೆ ನಂತರ ಜೊರಾಗಿ ಗಲಾಟೆಯಾದ ಶಬ್ದ ಕೇಳಿಸಿದಾಗ ನಾನು ಹೊರಗೆ ಬಂದು ನೋಡಿದಾಗ ಪಕ್ಕದ ಮನೆಯ ಆರೋಪಿಯಾದ ವಿಜಯ್ ರವರು ನನ್ನ ಚಿಕ್ಕಮ್ಮನನ್ನು ಹಿಡಿದು ಎಳೆದಾಡುತ್ತಿದ್ದರು ಮತ್ತು ಕೆಟ್ಟದಾಗಿ ಮುಟ್ಟುತಿದ್ದರು ಆ ಸಂದರ್ಭದಲ್ಲಿ ನಾನು ನನ್ನ ಚಿಕ್ಕಪ್ಪನಿಗೆ ಕರೆ ಮಾಡಲು ಪ್ರಯತ್ನಿಸಿದಾಗ ನನ್ನನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದರು. ಆದರೂ ನಾನು ನನ್ನ ಚಿಕ್ಕಪ್ಪನಿಗೆ ಕರೆ ಮಾಡಿ ನಡೆದ ಘಟನಾ ವಿಷಯದ ಬಗ್ಗೆ ತಿಳಿಸಿರುತ್ತೇನೆ. ಆರೋಪಿಯಾದ ವಿಜಯ್ ರವರು ನನ್ನ ಚಿಕ್ಕಪ್ಪ ಬಂದ ಶಬ್ದ ಕೇಳಿಸಿಕೊಂಡು ಅಲ್ಲಿಂದ ಪರಾರಿಯಾಗಿರುತ್ತಾರೆ.  ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಈ ದಿನ ಗೈರು ಹಾಜರಿದ್ದು ಅವರ ಗುರುತುವಿಕೆಯ ಬಗ್ಗೆ ತಕರಾರು ಇರುವುದಿಲ್ಲ.

**ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ನನ್ನ  ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್  ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.